# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಇತ್ತೀಚೆಗೆ ನಾಗಪುರದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ ನಿರ್ಧಾರಗಳನ್ನು ರೂಪಿಸುವ ಮಹತ್ವದ ವಾರ್ಷಿಕ ಬೈಠಕ್ ಅಖಿಲ ಭಾರತೀಯ ಪ್ರತಿನಿಧಿ ಸಭಾವನ್ನು ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಉದ್ಘಾಟಿಸಿದರು.


ಸಂಪುಟ : 36 | ಸಂಚಿಕೆ : 16 | ಜಯ–ಮೀನ | ಕಲಿಯುಗಾಬ್ದ 5116 | 1–4–2015 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಭವಿಷ್ಯದ ಕುಡಿಗಳಿಗೆ ಆದರ್ಶದ ಕನಸುಕಟ್ಟಬಲ್ಲ

# ಭಾರತ–ಭಾರತಿ ಪುಸ್ತಕಗಳು





"ನಾನೇನಾಗಬೇಕು?" – ಇದು ಎಲ್ಲರನ್ನೂ ಕಾಡುವ ಸಾಮಾನ್ಯ ಪ್ರಶ್ನೆ. ಉತ್ತರ ಕಂಡುಕೊಳ್ಳುವುದು ಬಹು ಕಷ್ಟದ ಕೆಲಸ. ಯಾಕೆಂದರೆ ನಾನೇನಾಗಬೇಕು ಎಂಬುದನ್ನು ನನಗೆ ತಿಳಿಸುವ "ರೋಲ್‌ಮಾಡೆಲ್" (ಆದರ್ಶ) ನಮ್ಮೆದುರಿಗಿರಬೇಕು. ಆಗ ನಾವು 'ನಾನು ಸರ್. ಎಂ. ವಿಶ್ವೇಶ್ವರಯ್ಯನವರಂತಾಗಬೇಕು; ಜಗದೀಶ್ ಚಂದ್ರ ಬೋಸ್‌ರಂತಾಗಬೇಕು, ವಿವೇಕಾನಂದರು ನೀಡಿದ ಆದರ್ಶದ ಮೇಲೆ ಬದುಕಬೇಕು, ಸುಭಾಷ್–ಸಾವರ್‌ಕರ್‌ರಂತಹ ಸಾಹಸಿ–ಚಾಣಾಕ್ಷ ನಾನಾಗಬೇಕು...' – ಎಂದು ಸುಲಭವಾಗಿ ನಿಶ್ಚಯಿಸಬಹುದು. ಆದರೆ ಇಂದು ನಮ್ಮ ಶಿಕ್ಷಿತ ಸಮೂಹದ ಮುಂದೆ, ಮಕ್ಕಳ ಮುಂದೆ 'ರೋಲ್ ಮಾಡೆಲ್'ಗಳೇ ಇಲ್ಲ. ನಮ್ಮ ಶಿಕ್ಷಣ ಪದ್ಧತಿಯಂತೂ ಈ ಕೆಲಸದಿಂದ ಎಂದೋ ವಿಮುಖವಾಗಿದೆ.

ನಮ್ಮ್ ಶಿಕ್ಷಣ ಪದ್ಧತಿಗಳಿಂದಾಗಿ ವಿದ್ಯಾಲಯಗಳಿಂದು ಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಮಗುವಿನ ಸಮಗ್ರ ವಿಕಾಸದ ಕೇಂದ್ರವಾಗಬೇಕಿದ್ದ ಶಾಲೆ, ಬರಿ ಅಕ್ಷರ ಕಲಿಕೆಯ ಕೇಂದ್ರವಾಗಿದೆ.

ಜೀವನಾನುಭವವನ್ನು ಗಳಿಸಲು, ಬದುಕಲು ಕಲಿಯಲು, ಹೊರಗಿನ ಪ್ರಪಂಚದೊಂದಿಗೆ ಮಕ್ಕಳು ಬೆರೆಯುವುದೇ ಉಪಾಯ. ಎಷ್ಟೇ ಅಂಕ ಗಳಿಸಿದರೂ ಒಬ್ಬ ಒಳ್ಳೆಯ ಮನುಷ್ಯನಾಗಬೇಕಾದರೆ, ಹೆಚ್ಚು ಹೆಚ್ಚು ನೋಡಬೇಕು, ಕೇಳಬೇಕು, ಓದಬೇಕು, ಅನುಭವಿಸಬೇಕು. ಆಗ ಮಾತ್ರ ಮಕ್ಕಳು ಪ್ರಪಂಚವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ. ತಮ್ಮ ಬದುಕಿಗೊಂದು ಅರ್ಥ ಕಂಡುಕೊಳ್ಳಲು ಸಾಧ್ಯ.

ಶಿಕ್ಷಣದಿಂದ ವಂಚಿತವಾದ ಬದುಕುವ ಕಲೆ ಹಾಗೂ ರೋಲ್ ಮಾಡೆಲ್(ಮಾದರಿ)ಗಳನ್ನು ಮಕ್ಕಳ ಮುಂದಿಡುವ ಸಲುವಾಗಿ ಬೆಂಗಳೂರಿನ ರಾಷ್ಟ್ರೋತ್ಥಾನ ಸಾಹಿತ್ಯ "ಭಾರತ–ಭಾರತಿ" ಎಂಬ ಮಕ್ಕಳ ಪುಸ್ತಕ ಮಾಲೆಯನ್ನು ಹೊರತಂದಿದೆ. ಅನಾದಿಕಾಲದಿಂದ ಆಧುನಿಕ ಕಾಲದವರೆಗಿನ ಭಾರತಮಾತೆಯ ಪುತ್ರರತ್ನರ ಬದುಕಿನ ಕ್ಷಣಗಳ ಮೇಲೆ ಬೆಳಕು ಚೆಲ್ಲಿ; ಯಾಕೆ ಬದುಕಬೇಕು–ಹೇಗೆ ಬದುಕಬೇಕು ಎಂಬುದನ್ನು ಭವಿಷ್ಯದ ಕುಡಿಗಳಿಗೆ ತಿಳಿಸಿ; ಆದರ್ಶದ ಕನಸುಕಟ್ಟಬಲ್ಲ ಪುಸ್ತಕಮಾಲೆಯೆಂಬ ಹೆಗ್ಗಳಿಕೆ ಈ "ಭಾರತ–ಭಾರತಿ" ಪುಸ್ತಕ ಮಾಲೆಯದ್ದು.

1971ರಲ್ಲಿ ಈ ಕಲ್ಪನೆಯ ಬೀಜಾಂಕುರವಾಯಿತು. ಅಂದಿನ ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಂ. ಮಧ್ವರಾವ್ ಅವರ ಯೋಚನೆ, ಆರೆಸ್ಸೆಸ್‌ನ ಪ್ರಚಾರಕರಾದ ಯಾದವರಾವ್ ಜೋಶಿ ಅವರ ಹಾರೈಕೆ, ರಾಷ್ಟ್ರೋತ್ಥಾನದ ಆಗಿನ ಪ್ರಧಾನ ವ್ಯವಸ್ಥಾಪಕ ಮೈ.ಚ. ಜಯದೇವ್ ಮತ್ತು ಕಾರ್ಯದರ್ಶಿ ಅರಕಲಿ ನಾರಾಯಣ್ ಅವರಿಂದ ನೀಲನಕ್ಷೆ – ಮಾಸ್ಟರ್ ಪ್ಲಾನ್ ಹಾಗೂ ಪ್ರೊ. ಎಲ್. ಎಸ್. ಶೇಷಗಿರಿರಾಯ ಅವರ ಪ್ರಧಾನ ಸಂಪಾದಕತ್ವದಲ್ಲಿ ಭಾರತ–ಭಾರತಿ ಪುಸ್ತಕ ಪ್ರಕಟಣೆ ಯೋಜನೆ ಪ್ರಾರಂಭವಾಯಿತು. ಒಂದು ದೃಷ್ಟಿಯಿಂದ ಇದು 'ಶೂನ್ಯ'ದಿಂದ ಆದ ಸೃಷ್ಟಿ. ಈ ಯೋಜನೆಯ ಕಲ್ಪನೆ ಮೂಡಿದ ಕಾಲದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಕೈಯಲ್ಲಿದ್ದ ಸಂಪನ್ಮೂಲವೂ ಶೂನ್ಯ. ಶ್ರದ್ಧೆ ಮತ್ತು ಉತ್ಸಾಹವಷ್ಟೆ ಅಲ್ಲಿದ್ದ ಬಂಡವಾಳ. ಆದರೆ ಗುರಿಯ ಸ್ಪಷ್ಟತೆ, ಶ್ರಮ, ಸಿದ್ಧತೆಗಳಿಂದಾಗಿ ಈ ಇತಿಹಾಸಾರ್ಹ ಯೋಜನೆಯನ್ನು ಸಾಧ್ಯ ಮಾಡಿತು.

ಈ ಸಾಹಿತ್ಯದ ಶ್ರೇಷ್ಠತೆಯನ್ನು ಅರಿತು ಗುಜರಾತಿ, ತೆಲುಗು, ತಮಿಳು, ಮಲಯಾಳಂ ಮೊದಲಾದ ಇತರ ಭಾಷೆಗಳಲ್ಲೂ 'ಭಾರತ–ಭಾರತಿ'ಯ ಪುಸ್ತಕಗಳು ಅನುವಾದಗೊಂಡು ಮುದ್ರಣ ಗೊಂಡಿದೆ. ಹೀಗೆ ಭಾರತದ ಸಾಹಿತ್ಯಲೋಕ, ಅದರಲ್ಲೂ ಮಕ್ಕಳ ಸಾಹಿತ್ಯ ಲೋಕದಲ್ಲಿ ಇತಿಹಾಸವನ್ನೇ ಸೃಷ್ಟಿಸಿದೆ. 'ವಾಲ್ಮೀಕಿ ಯಿಂದ ಜಯಪ್ರಕಾಶ್ ನಾರಾಯಣ' ವರೆಗಿನ 510 ಮಹಾಪುರುಷರ ಜೀವನದ ಮೇಲೆ ಬೆಳಕು ಚೆಲ್ಲಿದ ಭಾರತ–ಭಾರತಿ ಪುಸ್ತಕ ಮಾಲೆಯ ಪ್ರಕಟಣೆ ಕಾರ್ಯ 1981ರಲ್ಲಿ ಸಮಾರೋಪಗೊಂಡಿತ್ತು. ಅದಾಗಿ ಇಂದಿಗೆ ಮೂರು ದಶಕಗಳು ಕಳೆದವು. ಮೊದಲ ಯೋಜನೆಯಲ್ಲಿ ಸೇರಿರದ ನೂರಾರು ವ್ಯಕ್ತಿಗಳ ಬಗ್ಗೆ ಇದೀಗ ಸಾಹಿತಿ 'ಚಿರಂಜೀವಿ' ಅವರ ಪ್ರಧಾನ ಸಂಪಾದಕತ್ವದಲ್ಲಿ ಡಾ|| ರಾಜ್‌ಕುಮಾರ್, ಕಲ್ಪನಾ ಚಾವ್ಲಾ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶಿವರಾಮ ಕಾರಂತ, ಕೆರೆಮನೆ ಶಿವರಾಮ ಹೆಗಡೆ ಮುಂತಾದ ಮಹನೀಯರು ಸೇರಿದಂತೆ ಹೊಸದಾಗಿ 100 ಮಹಾಪುರುಷರ ಜೀವನಚರಿತ್ರೆಗಳು ಹೊರಬಂದಿವೆ.





ಭಾರತ–ಭಾರತಿ ಮೊದಲ ಸರಣಿಯ ಮೊದಲ ಹದಿನೈದು ಕಂತಿನ ಪುಸ್ತಕಗಳಿಗೆ ಇಟ್ಟಿದ್ದ ಬೆಲೆ 75 ಪೈಸೆ. ಮೊದಲ ಹತ್ತು ಪುಸ್ತಕಗಳ ಲೋಕಾರ್ಪಣ ಸಮಾರಂಭದ ದಿನವೇ 1,30,000 ಪ್ರತಿಗಳು ಮಾರಾಟವಾದವು. ಇದು 'ಮಕ್ಕಳ ಸಾಹಿತ್ಯ' ಎಂದು ಕಲ್ಪಿತವಾದ ಯೋಜನೆಯಾದರೂ ಪರಿಣಾಮದಲ್ಲಿ ಅನುಪಮ 'ಆಕರ ಸಾಹಿತ್ಯ'ವಾಗಿ ಪರಿಣಮಿಸಿತು. ಅನೇಕ ಮಹಾಪುರುಷರ ಬಗೆಗೆ ಥಟ್ಟನೆ ಹಿನ್ನೆಲೆ ಸಾಮಗ್ರಿ ಬೇಕಾದಾಗ ಲೇಖಕರಿಗೂ ಭಾಷಣಕಾರರಿಗೂ ಈಗಲೂ ಕಲ್ಪವೃಕ್ಷವಾಗಿರುವುದು 'ಭಾರತ–ಭಾರತಿ' ಮಾಲಿಕೆಯೇ. ಈಗ ಪ್ರತಿ ಪುಸ್ತಕದ ಬೆಲೆ ರೂ. 12

ಮಕ್ಕಳಿಗೆ ವಿಚಾರ ಶಕ್ತಿ, ವೈಜ್ಞಾನಿಕ ದೃಷ್ಟಿ ಕೊಡಬೇಕು. ವಿಚಾರಶಕ್ತಿ ಉದ್ದೀಪನಗೊಳಿಸಿದಲ್ಲಿ, ವ್ಯಕ್ತಿ ಅವಿವೇಕಿಯಾಗಲಾರ, ವಿವೇಕಿ ಆಗಿಯೇ ಆಗುವನು. ಭರತಖಂಡದ ಸಾವಿರಾರು ಮಹಾಪುರುಷರಿಂದ ಸ್ಫೂರ್ತಿಪಡೆದು ನಮ್ಮ ಎಳೆಯ ಜನಾಂಗ ಬೆಳೆದು ನಾಡನ್ನು ಮೇಲಕ್ಕೆತ್ತಬೇಕು, ಅದರ ಕೀರ್ತಿ ಜಗದ್ವಿಖ್ಯಾತವಾಗಬೇಕು– ಎಂಬ ಉದ್ದೇಶ 'ಭಾರತ–ಭಾರತಿ' ಪುಸ್ತಕ ಸಂಪದದಲ್ಲಿದೆ.

– ಕೆ.ವಿ. ಪುಟ್ಟಪ್ಪ (ಕುವೆಂಪು)



ಶ್ರೇಷ್ಠ ಪುರುಷರ ಹಾದಿಯನ್ನು ತಿಳಿಸುವ ಉತ್ತಮ ಸಾಹಿತ್ಯವನ್ನು ಬರೆಸಿ ಸಾಮಾನ್ಯ ಪ್ರಜೆಗೂ ದೊರಕುವಂತೆ ವ್ಯಾಪಕವಾಗಿ ಸಫಲವಾಗಿ ಮಾಡಬಲ್ಲ ರಾಷ್ಟ್ರೋತ್ಥಾನ ಪರಿಷತ್ತು ಈ ಮೂಲಕ ಎಳೆಯರನ್ನು ಸುಸಂಸ್ಕೃತರನ್ನಾಗಿ ಮಾಡಲಿ.

– ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು, ಸಿದ್ದಗಂಗಾ ಶ್ರೀಗಳು

ಪುಸ್ತಕಗಳಿಗೆ ಎಷ್ಟೋ ಮಾಹಿತಿಗಳನ್ನು ದೇಶದ ಯಾವುದೋ ಮೂಲೆಗಳಿಂದ ಕಷ್ಟಪಟ್ಟು ಸಂಗ್ರಹಿಸಬೇಕಾಯಿತು. ನೆಹರು ಕುಟುಂಬಕ್ಕೆ ಸಂಬಂಧಿಸಿದ ವಿವರಗಳನ್ನು ನೇರ ಇಂದಿರಾ ಗಾಂಧಿಯವರಿಂದಲೇ ಕೇಳಿ ತರಿಸಿಕೊಳ್ಳಲಾಯಿತು. ಖಾರವೇಲ, ಅಶ್ಫಾಕ್ ಉಲ್ಲಾ, ದೀಪಂಕರ ಮೊದಲಾದವರ ಬಗೆಗೆ ಭಾರತದ ಯಾವ ಭಾಷೆಯಲ್ಲಿಯೂ ಸಾಹಿತ್ಯ ಅದುವರೆಗೆ ಪ್ರಕಟವಾಗಿರಲೇ ಇಲ್ಲ. ರಾಮಪ್ರಸಾದ್ ಬಿಸ್ಮಿಲ್, ಮೇಡಂ ಕಾಮಾ ಮೊದಲಾದ ಅನೇಕರ ಬಗೆಗೆ ಪ್ರಾಯಶಃ ಕನ್ನಡದಲ್ಲಿ ಹೊರಬಂದ ಮೊದಲ ಪುಸ್ತಕಗಳೆಂದರೆ ಅದು ಭಾರತ–ಭಾರತಿಯದ್ದೇ.

## ನಿಮ್ಮ ಮಕ್ಕಳ ಕೈಯಲ್ಲಿರಲಿ ಈ ಪುಸ್ತಕ

ವಿದ್ಯಾರ್ಥಿಗಳಲ್ಲಿ ಜೀವನ ಮೌಲ್ಯ, ಸಾಮಾಜಿಕ ಶ್ರದ್ಧೆ, ಶಿಸ್ತು–ನೀತಿಗಳನ್ನು ಪೋಷಿಸುವ ಈ ಪುಸ್ತಕಗಳನ್ನು ನಮ್ಮ ಮನೆಯಲ್ಲಿ 'ಗ್ರಂಥಾಲಯ'ದಂತೆ ಸಂಗ್ರಹಿಸಿಟ್ಟುಕೊಳ್ಳಬಹುದೇ ಎಂಬುದನ್ನು ಪ್ರತಿಯೊಂದು ಕುಟುಂಬವೂ ಗಂಭೀರ ಚಿಂತನೆ ನಡೆಸಬೇಕಾದ ಅಗತ್ಯವಿದೆ.

ಒಟ್ಟು ಪುಸ್ತಕಗಳು: **610**
ಪ್ರತಿ ಪುಸ್ತಕದ ಬೆಲೆ: **ರೂ. 12.00**
(ಕೆಲವು ಶೀರ್ಷಿಕೆಗಳನ್ನು ಹೊರತುಪಡಿಸಿ, 100ಕ್ಕಿಂತ ಅಧಿಕ ಪುಸ್ತಕ ಖರೀದಿಗೆ ರಿಯಾಯಿತಿ ಇದೆ.)

ಪುಸ್ತಕಗಳಿಗೆ ಸಂಪರ್ಕಿಸಿ:
**ರಾಷ್ಟ್ರೋತ್ಥಾನ ಸಾಹಿತ್ಯ**
ಕೇಶವಶಿಲ್ಪ, ಕೆಂಪೇಗೌಡನಗರ,
ಬೆಂಗಳೂರು – 560 019,
ದೂರವಾಣಿ : 080–26612730
ಪ್ರಥ್ವಿ : 9880476396
ಲಕ್ಷ್ಮೀನಾರಾಯಣ ಭಟ್: 9945036300

"....'ರಾಷ್ಟ್ರೋತ್ಥಾನ'ದವರ ಯತ್ನ ನಿಜಕ್ಕೂ ಅಭಿನಂದನೀಯ.... ಈ ಕಾಲ, ಪರಿಸರದಲ್ಲಿ ಇಂತಹ ಸಾಹಿತ್ಯ ತೀರ ಅಗತ್ಯ.. ಬಾಲ್ಯಂದಲೇ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿ. ಮುಂದೆ ಉನ್ನತ ಧ್ಯೇಯ ಆದರ್ಶಗಳನ್ನಿರಿಸಿಕೊಂಡು ತಮ್ಮ ಬಾಳನ್ನು ರೂಪಿಸಿಕೊಳ್ಳಲು ಅವರಿಗೆ ಈ ಸಾಹಿತ್ಯ ತುಂಬ ನೆರವಾದೀತು.

".... ಯುವಜನ ಅಶಾಂತಿ, ವಿದ್ಯಾರ್ಥಿ ಗೊಂದಲ, ಕರ್ತವ್ಯ ಪ್ರಜ್ಞೆಯ ಲೋಪ, ಹಿಪ್ಪಿವಾದದತ್ತ ಹಂತಹಂತವಾಗಿ ಬೆಳೆಯುತ್ತಿರುವ ಎಳೆಯರ ಒಲವು– ಇವುಗಳನ್ನು ಸಾಕಷ್ಟು ತಗ್ಗಿಸಲು, ಒಂದು ನಿಟ್ಟಿನಲ್ಲಿ ಪರಿಹಾರ ಒದಗಿಸಲು ಇಂತಹ ಸಾಹಿತ್ಯ ಮಾರ್ಗದರ್ಶಿಯಾದೀತು"

– ಉದಯವಾಣಿ, ಮಣಿಪಾಲ: 8–11–1972

## ನಾವೇನು ಮಾಡಬಹುದು?

- ಇದೀಗ ಮಕ್ಕಳಿಗೆ ರಜೆಯ ಸಮಯ, ಪೋಷಕರು ತಮ್ಮ ಮಕ್ಕಳನ್ನು ಕೈಗೆ ಬದುಕಲು ಕಲಿಸುವ ಈ ಪುಸ್ತಕಗಳನ್ನು ಓದುವಂತೆ ಪ್ರೇರೇಪಿಸುವುದು.
- ಮಕ್ಕಳಿಗೆ ಹೊಸಬಟ್ಟೆ, ಆಟಿಕೆಗಳನ್ನು ಖರೀದಿಸುವಂತೆಯೇ ಪೋಷಕರು ಆಗಾಗ ಇಂತಹ ಪುಸ್ತಕಗಳನ್ನು ಖರೀದಿಸಿ ನೀಡುವುದು.
- ನಮ್ಮೂರಿನ ಶಾಲೆ, ವಾಚನಾಲಯ ಮುಂತಾದ ಗ್ರಂಥಾಲಯಗಳಲ್ಲಿ ಈ ಪುಸ್ತಕಗಳಿರುವಂತೆ ವ್ಯವಸ್ಥೆ ಮಾಡುವುದು.
- ನಮ್ಮೂರಿನ ಶಾಲಾ ವಿದ್ಯಾರ್ಥಿಗಳಿಗೆ ಈ ಪುಸ್ತಕಗಳ ಕುರಿತು ಶಾಲಾವಾರು, ತರಗತಿವಾರು ಪ್ರಬಂಧ, ರಸಪ್ರಶ್ನೆ, ಭಾಷಣ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸುವುದು. ನಿಮಿತ್ತಕ್ಕಾಗಿ ಅಗತ್ಯವಾದಲ್ಲಿ ಸ್ವಾತಂತ್ರ್ಯ, ಗಣರಾಜ್ಯ ದಿನೋತ್ಸವಗಳನ್ನು ಆರಿಸಿಕೊಳ್ಳುವುದು.
- ವಿವಿಧ ಸ್ಪರ್ಧೆಗಳಲ್ಲಿ ಸ್ಪರ್ಧಾ ವಿಜೇತರಾದವರಿಗೆ ಭಾರತ–ಭಾರತಿ ಪುಸ್ತಕಗಳನ್ನು ಬಹುಮಾನವಾಗಿ ನೀಡುವುದು.

ಸಮರ್ಥ ಭಾರತ
ಒಂದು ಗುರಿ - ಹಲವು ದಾರಿ

# ವೈಚಾರಿಕ ವೇದಿಕೆಗಳು (Intellectual Forums)

ಸಾರ್ವಜನಿಕ ಜಿಜ್ಞಾಸೆ (public discourse) ಯಾವುದೇ ಚಲನಶೀಲ ಸಮಾಜದ ಅವಿಭಾಜ್ಯ ಅಂಗ. ಶೈಕ್ಷಣಿಕ ವಲಯ, ಮಾಧ್ಯಮಗಳ ಜೊತೆಗೆ ಸಾರ್ವಜನಿಕ ವಿಚಾರ ಸಂಕೀರ್ಣಗಳು, ನಾಗರಿಕರ ಚಿಂತನಾ ಕೂಟಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ ಸಮಾಜ ಹಾಗೂ ಆಡಳಿತ ವ್ಯವಸ್ಥೆ ಕಾಲಕಾಲಕ್ಕೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಂಡು ಕಾರ್ಯನಿರ್ವಹಿಸುವಂತೆ ನಿರ್ದೇಶಿಸುತ್ತದೆ. ಆದ್ದರಿಂದ ಸ್ವಸ್ಥ ಸಮಾಜ ಸಾಧ್ಯವಾಗಬೇಕಾದರೆ ಆರ್ಥಿಕ ಹಾಗೂ ಭೌತಿಕ ಪ್ರಗತಿಯ ಜೊತೆಗೆ ಬೌದ್ಧಿಕ ಬೆಳವಣಿಗೆ ಮತ್ತು ಚಿಂತನಾ ಮಾರ್ಗವೂ ಸರಿಯಾದ ದಿಕ್ಕಿನಲ್ಲಿರುವುದು ಅನಿವಾರ್ಯ. ಆದರೆ ಸಹಸ್ರಾರು ವರ್ಷಗಳ ನಿರಂತರ ಹಾಗೂ ಸಮೃದ್ಧ ಚಿಂತನಾ ಪರಂಪರೆಯುಳ್ಳ ಭಾರತದಲ್ಲಿಂದು ಬೌದ್ಧಿಕ ಆಲೋಚನಾ ಪದ್ಧತಿಯು ಪಾಶ್ಚಾತ್ಯರ ಅಂಧಾನುಕರಣೆಯಿಂದ ಶಿಥಿಲಗೊಂಡಿದೆ. ಬುದ್ಧಿಜೀವಿಗಳೆಂದರೇ ಅವರನ್ನು ಹಾಸ್ಯದ ದೃಷ್ಟಿಯಿಂದ ನೋಡುವ ಪದ್ಧತಿ ಬೆಳೆದುಬಿಟ್ಟಿದೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿಷಯಗಳ ಮೇಲೆ ಗಂಭೀರ ಚಿಂತನೆ-ಚರ್ಚೆಗಳನ್ನು ನಡೆಸುವ ದೃಷ್ಟಿಯಿಂದ ವೈಚಾರಿಕ ವೇದಿಕೆಗಳು (intellectual forum) ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಒಂದು ವಿಚಾರದ ಬಗ್ಗೆ ಅನುಭವವುಳ್ಳ ವ್ಯಕ್ತಿಗಳು ಚರ್ಚಾಕೂಟವನ್ನು ನಡೆಸಿಕೊಡುತ್ತಾರೆ. ಇಂತಹ ಕಾರ್ಯಕ್ರಮಗಳಲ್ಲಿ ತಜ್ಞರ ಬಳಿ ಪ್ರಶ್ನೆಗಳನ್ನು ಕೇಳುವ ಮೂಲಕ ಸಂಶಯಗಳನ್ನು ನಿವಾರಿಸಿಕೊಳ್ಳಬಹುದು. ಇಂತಹ ವಿಚಾರ ಸಂಕೀರ್ಣಗಳು ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿ ಮಂಥನ, ವರ್ತಮಾನ ಮುಂತಾದ ಬ್ಯಾನರ್‌ಗಳ ಅಡಿಯಲ್ಲಿ ನಡೆಯುತ್ತವೆ. ಚರ್ಚಾ ವಿಷಯಗಳು ಗಂಭಿರ ಹಾಗೂ ಉನ್ನತ ಮಟ್ಟದ್ದಾಗಿದ್ದು ರಾಷ್ಟ್ರೀಯ ಭದ್ರತೆ, ಆರ್ಥಿಕತೆ, ಪರಿಸರ, ಸಾಮಾಜಿಕ, ಧಾರ್ಮಿಕ ವಿಚಾರಗಳು, ಮಹಿಳಾ ಸುರಕ್ಷತೆಯಂತಹ ಹಲವು ವಿಚಾರಗಳ ಬಗ್ಗೆ ಒತ್ತು ನಿಡಲಾಗುತ್ತದೆ.

## ಕಾರ್ಯವಿಧಾನ

ಮಂಥನದಂತಹ ವೇದಿಕೆಗಳ ಕಾರ್ಯವಿಧಾನ ತುಂಬ ಸರಳವಾದುದು. ತಿಂಗಳಿಗೊಮ್ಮೆ ಚಿಕ್ಕ ಸಭಾಂಗಣದಲ್ಲಿ, ಶಾಲಾ ಆವರಣದಲ್ಲಿ, ಕಾರ್ಯಾಲಯದ ಕೊಠಡಿ ಅಥವಾ ಯಾರದಾದರೂ ಮನೆಯ ಅಂಗಳದಲ್ಲಿ ಸುಮಾರು ಇಪ್ಪತ್ತು-ಇಪ್ಪತ್ತೈದು ಸಮಾನ ಮನಸ್ಕರು ಒಟ್ಟಿಗೆ ಕಲೆಯುವುದು. ಯಾವುದಾದರೂ ರಾಷ್ಟ್ರೀಯ, ಸಾಮಾಜಿಕ ಅಥವಾ ಸಾಂಸ್ಕೃತಿಕ ವಿಷಯವನ್ನು ಎತ್ತಿಕೊಂಡು ಆ ಕುರಿತು ಮಾತನಾಡಲು ಸಂಪನ್ಮೂಲ ವ್ಯಕ್ತಿಯೊಬ್ಬರನ್ನು ಆಹ್ವಾನಿಸುವುದು. ವಿಷಯದ ಮೇಲೆ ಚಿಂತನೆ ಚರ್ಚೆ ನಡೆಸುವುದು. ಮುಖ್ಯ ವಿಷಯಗಳನ್ನು ದಾಖಲಿಸುವುದು, ವರದಿಗಳನ್ನು ತಯಾರಿಸುವುದು, ಸಾಧ್ಯವಾದಲ್ಲಿ ವೀಡಿಯೋ ಚಿತ್ರೀಕರಣವನ್ನು ಮಾಡಿ ಯು-ಟ್ಯೂಬ್ ಮೂಲಕ ಅಪ್‌ಲೋಡ್ ಮಾಡುವುದು, ಇತರರೊಡನೆ ಹಂಚಿಕೊಳ್ಳುವುದು.

## ಪರಿಣಾಮಗಳು

- ರಾಜ್ಯದ ಹಲವಾರು ಕಡೆಗಳಲ್ಲಿ ಮಂಥನ, ವರ್ತಮಾನ ಮೊದಲಾದ ಹೆಸರಿನಲ್ಲಿ ಚಿಂತನಾಕೂಟಗಳು ನಡೆಯುತ್ತಿದ್ದು, ಇಂತಹ ವಿಚಾರ ಸಂಕೀರ್ಣಗಳಲ್ಲಿ ರಾಷ್ಟ್ರದ ಹೆಸರಾಂತ ಚಿಂತಕರಾದ ಅರುಣ ಶೌರಿ, ಡಾ॥ ಎಸ್.ಎಲ್. ಭೈರಪ್ಪ, ಡಾ॥ ಚಿದಾನಂದಮೂರ್ತಿ, ಶತಾವಧಾನಿ ಗಣೇಶ್, ಪ್ರೊ ರಾಕೇಶ್ ಸಿನ್ಹಾ, ರಾಮ್ ಮಾಧವ್, ತರುಣ್ ವಿಜಯ್ ಮೊದಲಾದ ಹಲವರು ಉಪನ್ಯಾಸಗಳನ್ನು ನೀಡಿ ಸಂವಾದ ನಡೆಸಿದ್ದಾರೆ.
- ಇಂತಹ ಕಾರ್ಯಕ್ರಮಗಳು ಮತ್ತು ಮಾಧ್ಯಮಗಳಲ್ಲಿ ಬಿತ್ತರವಾದ ವರದಿಗಳು ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯ ಮೂಡುವಂತೆ ಮಾಡಿರುವುದಲ್ಲದೆ, ಕೆಲವೊಮ್ಮೆ ಸರ್ಕಾರದ ನೀತಿ ಪ್ರಸ್ತಾವನೆಗಳ ಮೇಲೆಯೂ ಪ್ರಭಾವ ಬೀರಿವೆ. ಉದಾಹರಣೆಗೆ ಹಿಂದಿನ ಯುಪಿಎ ಸರ್ಕಾರವು ಮೈಸೂರಿನ ಶ್ರೀರಂಗಪಟ್ಟಣದ ಬಳಿ ಸ್ಥಾಪಿಸಲು ಉದ್ದೇಶಿಸಿದ್ದ ಮುಸ್ಲಿಂ ವಿಶ್ವವಿದ್ಯಾಲಯದ ಕುರಿತಂತೆ 'ಮಂಥನ'ವು ರಾಜ್ಯದಾದ್ಯಂತ ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿದ ಪರಿಣಾಮವಾಗಿ ಸರ್ಕಾರವು ತನ್ನ ಪ್ರಸ್ತಾವನೆಯನ್ನು ಹಿಂತೆಗೆಯುವಂತೆ ಆಯಿತು.
- ಈ ಕೂಟಗಳು ಹಲವಾರು ಬರಹಗಾರರಿಗೆ, ಚಿಂತಕರಿಗೆ, ಸಾರ್ವಜನಿಕರಿಗೆ ಮಾಹಿತಿ ಹಾಗೂ ವಿಚಾರ ವಿನಿಮಯದ ವೇದಿಕೆಯನ್ನೊದಗಿಸಿದೆ.
- ಮಂಥನದ ಕಾರ್ಯಕ್ರಮಗಳು ವಿಚಾರ ಸಂಕಿರಣಗಳನ್ನು ಆಯೋಜಿಸುವವರಿಗೆ ಮಾದರಿಯಾಗಿದೆ.

## ನಾವೇನು ಮಾಡಬಹುದು?

- ಈಗಾಗಲೆ ಕಾರ್ಯ ನಿರ್ವಹಿಸುತ್ತಿರುವ ವೇದಿಕೆಗಳಲ್ಲಿ ತಂಡದ ಸದಸ್ಯರಾಗಿ ಕಾರ್ಯಕ್ರಮಗಳನ್ನು ಆಯೋಜಿಸಬಹುದು.
- ನಮ್ಮ ಊರು ನಗರಗಳಲ್ಲಿ ಹೊಸ ವೇದಿಕೆಗಳನ್ನು ಸಂಘಟಿಸಬಹುದು.
- ಇಂತಹ ವೇದಿಕೆಗಳಿಗೆ ಸಮಾಜದ ಗಣ್ಯ ವ್ಯಕ್ತಿಗಳು, ಚಿಂತಕರು, ಶಿಕ್ಷಕರುಗಳು, ಪತ್ರಕರ್ತರು ಮೊದಲಾದವರನ್ನು ಜೋಡಿಸುವುದು.
- ಸಾಮಾಜಿಕ ಆಗುಹೊಗುಗಳ ಬಗ್ಗೆ ಸಮರ್ಪಕ ತಿಳುವಳಿಕೆ, ಈ ಕುರಿತು ವಿಷಯ ತಜ್ಞರೊಂದಿಗೆ ಸಮಾಲೊಚನೆ ಮಾಡುವ ಸ್ವಭಾವ ಮೈಗೂಡಿಸುವುದು.
- ರಾಷ್ಟ್ರೀಯ ಹಾಗೂ ಸಾಮಾಜಿಕ ಚಿಂತನೆಯುಳ್ಳ ವಿಚಾರಗಳ ಮೇಲೆ ಕಾಲೇಜು ಹಾಗೂ ಯುನಿವರ್ಸಿಟಿಗಳಲ್ಲಿ ಕಾರ್ಯಕ್ರಮ ಆಯೋಜಿಸುವುದು.
- ಪಾಲ್ಗೊಳ್ಳುವವರ ಪಟ್ಟಿಯನ್ನು ಮಾಡಿ, ಸಂಪರ್ಕ, ಇ ಮೇಲ್ ವಿಳಾಸಗಳನ್ನು ಸಂಗ್ರಹಿಸುವುದು. ಕಾರ್ಯಕ್ರಮಕ್ಕೆ ಬಂದಿರುವವರ ನಡುವೆ ನೆಟ್‌ವರ್ಕ್ ಬೆಳೆಸುವುದು.
- ಕಾರ್ಯಕ್ರಮದ ಪ್ರಚಾರಕ್ಕೆ ಇ ಮೇಲ್ ಹಾಗೂ ಸಾಮಾಜಿಕ ಜಾಲ ತಾಣಗಳನ್ನು ಬಳಸುವುದು. ಕಾರ್ಯಕ್ರಮದ ಮುಂಚಿತವಾಗಿ ಹಾಗೂ ನಂತರದ ಕೆಲಸಗಳಾದ ವೇದಿಕೆ ನಿರ್ವಹಣೆ, ನಿರೂಪಣೆ, ಛಾಯಾಚಿತ್ರ-ವೀಡಿಯೋ ಚಿತ್ರೀಕರಣ, ಕಾರ್ಯಕ್ರಮದ ವರದಿಗಳನ್ನು, ಕಡತಗಳನ್ನು ತಯಾರಿಸುವುದು.
- ಮಾಧ್ಯಮಗಳಿಗೆ ಕಾರ್ಯಕ್ರಮದ ವರದಿಗಳನ್ನು ನೀಡುವುದು.
- ಉಳಿದ ಇಂತಹ ವೈಚಾರಿಕ ವೇದಿಕೆಗಳೊಡನೆ ಸಂಪರ್ಕ ಸಾಧಿಸುವುದು; ಎರಡು ಮೂರು ವೇದಿಕೆಗಳ ಸಹಯೋಗದಲ್ಲೊ ದೊಡ್ಡ ಪ್ರಮಾಣದಲ್ಲಿ ಹೆಚ್ಚು ಮಹತ್ವವುಳ್ಳ ವಿಷಯಗಳಲ್ಲಿ ಸಂವಾದಗಳನ್ನು ಏರ್ಪಡಿಸುವುದು.

**ಸಂಪರ್ಕ**
ಬಿ.ಪಿ. ಶ್ರೀನಿವಾಸ್ – 9341232491
ರಾಜೇಶ್ ಪದ್ಮಾರ್ – 9880621824
ರಾಧಾಕೃಷ್ಣ ಹೊಳ್ಳ – 9731264009
Email: bpsrinu@gmail.com, manthanakarnataka@gmail.com

## ಸಾಲುದ್ದದ ಸುದ್ದಿಗಳು



- **ಹರಿಯಾಣ ವಿಧಾನಸಭೆಯಲ್ಲಿ ಗೋಹತ್ಯೆ ನಿಷೇಧ ವಿಧೇಯಕಕ್ಕೆ ಮಾರ್ಚ್ 16ರಂದು ಅನುಮೋದನೆಯಾಗಿದೆ. ಹೊಸ 'ಗೋ ಸಂರಕ್ಷಣೆ ಮತ್ತು ಗೋ ಸಂವರ್ಧನೆ ವಿಧೇಯಕ'ದಲ್ಲಿ ಗೋಹತ್ಯೆ ಮಾಡುವವರಿಗೆ 3 ರಿಂದ 10 ವರ್ಷಗಳ ವರೆಗಿನ ಕಠಿಣ ಶಿಕ್ಷೆ ಮತ್ತು 30,000 ರೂ. ನಿಂದ 1 ಲಕ್ಷ ರೂ. ವರೆಗೆ ದಂಡ ವಿಧಿಸಲು ಅವಕಾಶವಿದೆ. ದೇಸಿ ಆಕಳು ತಳಿಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಮುಂದಾಗಿರುವ ಹರಿಯಾಣ ಸರಕಾರ ದೇಸಿ ತಳಿಗಳಿಗೆ ಆಧಾರ್ ಕಾರ್ಡ್‌ನಂತೆ ಗುರುತಿನ ಚೀಟಿ ನೀಡಲು ನಿರ್ಧರಿಸಿದೆ. ಹಸುಗಳ ಗುರುತಿಗೆ 12 ಅಂಕೆಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು ವಿತರಿಸಲಾಗುತ್ತದೆ. ಇದನ್ನು ಹಸುಗಳ ಕುತ್ತಿಗೆಗೆ ಸಿಕ್ಕಿಸಲಾಗುತ್ತದೆ. ಜತೆಗೆ ಇದಕ್ಕೆ ಸಂಬಂಧಿಸಿದ ಕೈಪಿಡಿಯನ್ನೂ ದನದ ಮಾಲಿಕರಿಗೆ ವಿತರಿಸಲಾಗುತ್ತದೆ. ಜತೆಗೆ ಪ್ರತೀ ತಳಿಯ ರಕ್ಷಣೆಗೂ 5 ಲಕ್ಷ ರೂಪಾಯಿಯ 'ಕಾಮಧೇನು' ಪ್ರಶಸ್ತಿ ನೀಡಲು ನಿರ್ಧರಿಸಿದೆ. ದೇಸಿ ತಳಿಗಳ ಅಭಿವೃದ್ಧಿಗೆ ಶ್ರಮಿಸುವ ರೈತರಿಗೆ ಪ್ರೋತ್ಸಾಹ ನೀಡುವ ಸಲುವಾಗಿ 1 ಲಕ್ಷ ರೂ ನಗದು ಬಹುಮಾನವನ್ನೊಳಗೊಂಡ ಗೋಪಾಲರತ್ನ ಪ್ರಶಸ್ತಿ ನೀಡಲೂ ಹರಿಯಾಣ ಸರಕಾರ ನಿರ್ಧರಿಸಿದೆ. ಅತಿ ಹೆಚ್ಚು ಗೋವುಗಳ ಪಾಲನೆ ಮಾಡುವ ಗೋಶಾಲೆಗಳಿಗೆ ಪ್ರತಿವರ್ಷ 5 ಲಕ್ಷ ರೂ. ನೆರವು ನೀಡಲು ಸರಕಾರ ನಿರ್ಧರಿಸಿದೆ.**



- ಎಲ್ಲ ಈಶಾನ್ಯ ರಾಜ್ಯಗಳ ರಾಜಧಾನಿಗಳನ್ನು 2020ರೊಳಗಾಗಿ ಭಾರತೀಯ ರೈಲ್ವೆ ಜಾಲದೊಂದಿಗೆ ಸಂಪರ್ಕಿಸಲು ಯೋಜನೆ ರೂಪಿಸಲಾಗಿದೆ ಎಂದು ಈಶಾನ್ಯ ಫ್ರಂಟಿಯರ್ ರೈಲ್ವೆ (ಎನ್‌ಎಫ್‌ಆರ್) ತಿಳಿಸಿದೆ. ಮಿಜೋರಾಂ ರಾಜಧಾನಿ ಐಜವಾಲ್ ಹಾಗೂ ಮಣಿಪುರ ರಾಜಧಾನಿ ಇಂಫಾಲ್‌ಗೆ 2018-19 ರೊಳಗಾಗಿ ರೈಲ್ವೆ ಕಲ್ಪಿಸಲಾಗುವುದು ಹಾಗೂ ಈಶಾನ್ಯ ರಾಜ್ಯಗಳಲ್ಲಿ ಈಗಾಗಲೇ ಇರುವ 2700 ಕಿ.ಮೀ. ರೈಲ್ವೆ ಹಳಿಯನ್ನು ಮೇಲ್ದರ್ಜೆಗೇರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದೆ.

- **ವಿಶ್ವದಲ್ಲೇ ಅತ್ಯಂತ ಅಗ್ಗದ ಬೆಲೆಗೆ ಸ್ಥಳೀಯವಾಗಿ ತಯಾರು ಮಾಡಲ್ಪಟ್ಟ ರೋಟಾವೈರಸ್ ಲಸಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಬಿಡುಗಡೆಮಾಡಿದ್ದಾರೆ. ಭಾರತದಲ್ಲಿ ತಯಾರಾದ ಮತ್ತು ಅತ್ಯಂತ ಕಡೆಮೆ ಬೆಲೆಯಲ್ಲಿ ಕೈಗೆಟಕುವಂತಿರುವ ಈ ಲಸಿಕೆ, ದೇಶದಲ್ಲಿ ಡಯೇರಿಯಾದಿಂದ ಆಗುತ್ತಿರುವ ಹೆಚ್ಚಿನ ಪ್ರಮಾಣದ ಶಿಶುಗಳ ಮರಣವನ್ನು ಬಹಳಷ್ಟು ಕಡಿಮೆಗೊಳಿಸುವ ಸಾಮರ್ಥ್ಯಹೊಂದಿದೆ. ಪ್ರತಿ ವರ್ಷ ಐದು ವರ್ಷದೊಳಗಿನ ಸುಮಾರು 80,000 ಮಕ್ಕಳು ಡಯೇರಿಯಾಕ್ಕೆ ಬಲಿಯಾಗುತ್ತಿದ್ದಾರೆಂದು ಅಂದಾಜಿಸಲಾಗಿದೆ.**

- ಸ್ವಚ್ಛ ಭಾರತ ಮಿಷನ್ ಯೋಜನೆಯಡಿ 2019ರ ವೇಳೆಗೆ 10 ಕೋಟಿ ಶೌಚಾಲಯಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ಸರಕಾರ ತಿಳಿಸಿದೆ. ಕಳೆದ ಒಂದು ವರ್ಷದ ಎನ್‌ಡಿಎ ಅಧಿಕಾರಾವಧಿಯಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಇದುವರೆಗೆ 40 ಲಕ್ಷ ವೈಯಕ್ತಿಕ ಶೌಚಾಲಯ ನಿರ್ಮಿಸಲಾಗಿದೆ. 2019ರ ವೇಳೆಗೆ ಪ್ರತಿಯೊಂದು ಕುಟುಂಬವೂ ಶೌಚಾಲಯ ಹೊಂದಿರಬೇಕು. ಬಯಲಿನಲ್ಲಿ ಮಲವಿಸರ್ಜನೆ ಮಾಡುವ ಪದ್ಧತಿಯನ್ನು ನಿರ್ಮೂಲನೆಗೊಳಿಸಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಕೇಂದ್ರ ಸರಕಾರ ಹೊಂದಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ತ್ವರಿತವಾಗಿ ಶೌಚಾಲಯ ನಿರ್ಮಾಣ ಮಾಡಲು ರಾಜ್ಯ ಸರಕಾರಗಳಿಗೆ ಎಲ್ಲ ರೀತಿಯ ಸರಕಾರ ನೀಡುವುದಾಗಿ ಅದು ತಿಳೀಸಿದೆ.

ಸ್ವಚ್ಛ ಭಾರತ
ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ



- **ಹರ್ಯಾಣ ಸರಕಾರ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲ ಶಾಲೆಗಳಲ್ಲಿ 'ಭಗವದ್ಗೀತೆ' ಬೋಧನೆಯನ್ನು ಜಾರಿಗೆ ತರಲು ನಿರ್ಧರಿಸಿದೆ. ವಿದ್ಯಾರ್ಥಿಗಳಿಗೆ ಗೀತೆಯ ಶ್ಲೋಕಗಳನ್ನು ಬೋಧಿಸಲಾಗುವುದು ಎಂದು ಸರಕಾರ ತಿಳಿಸಿದೆ.**

- ಇಸ್ಲಾಮಿಕ್ ಸ್ಟೇಟ್ ಉಗ್ರವಾದಿ ಸಂಘಟನೆಯ ಪರ ಹೋರಾಡಲು ತೆರಳಿದ್ದ ಭಟ್ಕಳದ 39 ವರ್ಷದ ಸುಲ್ತಾನ್ ಅಬ್ದುಲ್ ಖಾದಿರ್ ಆರ್ಮರ್ ಎಂಬಾತ ಮಾರ್ಚ್ 6ರಂದು ಸಿರಿಯಾ-ಟರ್ಕಿ ಗಡಿಯಲ್ಲಿರುವ ಕೊಬೇನ್‌ನಲ್ಲಿ ಸಾವನ್ನಪ್ಪಿದ್ದಾನೆ ಎಂದು ಗುಪ್ತಚರ ಮೂಲಗಳಿಂದ ತಿಳಿದು ಬಂದಿದೆ. ಹಿಂದೆ ತ್ವಹಿದ್ ಅಲ್-ಅನ್ಸರ್ ಎಂಬ ಉಗ್ರವಾದಿ ಸಂಘಟನೆ ಬಿಡುಗಡೆಗೊಳಿಸಿದ್ದ ವಿಡಿಯೋದಲ್ಲಿ ಕಾಣಿಸಿಕೊಂಡಿದ್ದ ಈತ ಉತ್ತರ ಪಾಕಿಸ್ತಾನದ ವಝೀರಿಸ್ತಾನ್ ಜಿಹಾದಿ ಶಿಬಿರಗಳಲ್ಲಿ ತರಬೇತಿ ಪಡೆದು ಜಿಹಾದಿ ಚಟುವಟಿಕೆಗಳಲ್ಲಿ ತೊಡಗುವಂತೆ ಭಾರತೀಯ ಮುಸ್ಲೀಮರನ್ನು ಆಹ್ವಾನಿಸಿದ್ದ.



- **ಚೀನಾ ಸರ್ಕಾರಿ ಬೆಂಬಲಿತ ಪಬ್ಲಿಷಿಂಗ್ ಕಂಪನಿ 'ನ್ಯಾಷನಲ್ ಇಮೇಜ್ ಗ್ಲೋಬಲ್ ಸರ್ವೆ' ನಡೆಸಿರುವ ಸಮೀಕ್ಷೆಯ ಪ್ರಕಾರ ದೇಶೀಯ ಹಾಗೂ ಅಂತರರಾಷ್ಟ್ರೀಯ ವ್ಯವಹಾರಗಳನ್ನು ನಿಭಾಯಿಸುವುದರಲ್ಲಿ ಜಾಗತಿಕ ನಾಯಕರ ಪೈಕಿ ಪ್ರಧಾನಿ ನರೇಂದ್ರ ಮೋದಿಯವರು ಮೊದಲನೆ ಸ್ಥಾನದಲ್ಲಿದ್ದಾರೆ ಹಾಗೂ ಎರಡನೆ ಸ್ಥಾನದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಇದ್ದಾರೆ. ವಿವಿಧ ರಾಷ್ಟ್ರಗಳ ಪ್ರಭಾವ ಹಾಗೂ ಮುಖಂಡರ ಕುರಿತು ಜನರಿಂದ ಈ ಮಾಹಿತಿಯನ್ನು ಕಲೆಹಾಕಲಾಗಿದೆ ಎಂದು ಅದು ತಿಳಿಸಿದೆ.**

ಸಂಪಾದಕೀಯ ಸಹಕಾರ | ಸತ್ಯನಾರಾಯಣ ಶಾನಭಾಗ್, ಪ್ರವೀಣ್ ಪಟವರ್ಧನ್, ಮಹೇಶ್ ಎಸ್, ಶ್ರೀವತ್ಸ, ಶಿವಪ್ರಸಾದ್ ಸುರ್ಯ, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

ನಾಗಪುರದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ ನಿರ್ಧಾರಗಳನ್ನು ರೂಪಿಸುವ ಮಹತ್ವದ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಸಂಘದ ಜವಾಬ್ದಾರಿಗಳಲ್ಲಿ ಮಹತ್ವದ ಬದಲಾವಣೆ ಮಾಡಲಾಗಿದ್ದು ಅವುಗಳ ವಿವರ ಇಂತಿವೆ.

## ರಾಷ್ಟ್ರೀಯ ಪದಾಧಿಕಾರಿಗಳು (2015-16)

ಸರಸಂಘಚಾಲಕ - ಡಾ. ಮೋಹನರಾವ್ ಭಾಗವತ್
ಸರಕಾರ್ಯವಾಹ - ಶ್ರೀ ಸುರೇಶ ಭಯ್ಯಾಜಿ ಜೋಷಿ
ಸಹಸರಕಾರ್ಯವಾಹ - ಶ್ರೀ ದತ್ತಾತ್ರೇಯ ಹೊಸಬಾಳೆ
ಸಹಸರಕಾರ್ಯವಾಹ - ಶ್ರೀ ಸುರೇಶ ಸೋನಿ
ಸಹಸರಕಾರ್ಯವಾಹ - ಡಾ. ಕೃಷ್ಣ ಗೋಪಾಲ
ಸಹಸರಕಾರ್ಯವಾಹ - ಶ್ರೀ ವಿ ಭಾಗಯ್ಯ
ಅಖಿಲ ಭಾರತೀಯ ಬೌದ್ಧಿಕ್ ಪ್ರಮುಖ್ - ಶ್ರೀ ಸ್ವಾತ ರಂಜನ್
ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ - ಶ್ರೀ ಸಿ.ಆರ್. ಮುಕುಂದ
ಅಖಿಲ ಭಾರತೀಯ ಶಾರೀರಿಕ ಪ್ರಮುಖ್ - ಶ್ರೀ ಸುನೀಲ್ ಕುಲಕರ್ಣಿ
ಅಖಿಲ ಭಾರತೀಯ ಸಹ ಶಾರೀರಿಕ ಪ್ರಮುಖ್ - ಶ್ರೀ ಜಗದೀಶ ಪ್ರಸಾದ
ಅಖಿಲ ಭಾರತೀಯ ಸಂಪರ್ಕ ಪ್ರಮುಖ್ - ಶ್ರೀ ಅನಿರುದ್ಧ ದೇಶಪಾಂಡೆ
ಅಖಿಲ ಭಾರತೀಯ ಸಹ ಸಂಪರ್ಕ ಪ್ರಮುಖ್ - ಶ್ರೀ ಅರುಣಕುಮಾರ್
ಅಖಿಲ ಭಾರತೀಯ ಸಹ ಸಂಪರ್ಕ ಪ್ರಮುಖ್ - ಶ್ರೀ ಸುನಿಲ್ ದೇಶಪಾಂಡೆ
ಅಖಿಲ ಭಾರತೀಯ ಸೇವಾ ಪ್ರಮುಖ್ - ಶ್ರೀ ಸುಹಾಸ್ ಹಿರೇಮಠ್
ಅಖಿಲ ಭಾರತೀಯ ಸಹ ಸೇವಾ ಪ್ರಮುಖ್ - ಶ್ರೀ ಅಜಿತ್ ಮಹಾಪಾತ್ರ
ಅಖಿಲ ಭಾರತೀಯ ಸಹ ಸೇವಾ ಪ್ರಮುಖ್ - ಶ್ರೀ ಗುಣವಂತ್ ಕೊಠಾರಿ
ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ - ಶ್ರೀ ಮಂಗೇಶ್ ಭೇಂಡೆ
ಅಖಿಲ ಭಾರತೀಯ ಸಹ ವ್ಯವಸ್ಥಾ ಪ್ರಮುಖ್ - ಶ್ರೀ ಅನಿಲ್ ಓಕ್
ಅಖಿಲ ಭಾರತೀಯ ಪ್ರಚಾರ ಪ್ರಮುಖ್ - ಡಾ. ಮನಮೋಹನ್ ವೈದ್ಯ
ಅಖಿಲ ಭಾರತೀಯ ಸಹ ಸಹ ಪ್ರಚಾರ ಪ್ರಮುಖ್ - ಶ್ರೀ ಜೆ ನಂದಕುಮಾರ್
ಅಖಿಲ ಭಾರತೀಯ ಪ್ರಚಾರಕ್ ಪ್ರಮುಖ್ - ಶ್ರೀ ಸುರೇಶ್ ಚಂದ್ರ
ಅಖಿಲ ಭಾರತೀಯ ಸಹ ಸಹ ಪ್ರಚಾರಕ್ ಪ್ರಮುಖ್ - ಶ್ರೀ ವಿನೋದ್ ಕುಮಾರ್
ಅಖಿಲ ಭಾರತೀಯ ಸಹ ಸಹ ಪ್ರಚಾರಕ್ ಪ್ರಮುಖ್ - ಶ್ರೀ ಅದ್ವೈತ ಚರಣ ದತ್ತ

**ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು:** ಇಂದ್ರೇಶ್ ಕುಮಾರ್, ಮಧುಭಾಯಿ ಕುಲಕರ್ಣಿ, ಶಂಕರ ಲಾಲ, ಡಾ. ದಿನೇಶ, ಮುಕುಂದ ರಾವ್ ಪಣಶೀಕರ್, ಸಾಂಕಲ್ ಚಂದ್ರ ಬಾಗ್ರೇಚಾ, ಹಸ್ತಿಮಲ್, ಸುನೀಲ್‌ಪಾದ್ ಗೋಸ್ವಾಮಿ, ಮಹಾವೀರ್, ಅಶೋಕ್ ಬೇರಿ ಹಾಗೂ ಎಲ್ಲಾ ಕ್ಷೇತ್ರಗಳ ಮಾನ್ಯ ಸಂಘಚಾಲಕರುಗಳು



## ಸುರೇಶ ಜೋಷಿ: ಸರಕಾರ್ಯವಾಹರಾಗಿ ಮರು ಆಯ್ಕೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ 2ನೇ ಪ್ರಮುಖ ಜವಾಬ್ದಾರಿಯಾದ ಸರಕಾರ್ಯವಾಹರಾಗಿ ಸತತ ಮೂರನೇ ಬಾರಿಗೆ ಸುರೇಶ ಭಯ್ಯಾಜಿ ಜೋಷಿ ಅವರು ನೇಮಕಗೊಂಡಿದ್ದಾರೆ. ಅವಿರೋಧವಾಗಿ ಆಯ್ಕೆಗೊಂಡಿರುವ ಭಯ್ಯಾಜಿ ಜೋಷಿ ಅವರು ಮುಂದಿನ ಮೂರು ವರ್ಷಗಳ ಕಾಲ ಅಂದರೆ 2018ರ ಮಾರ್ಚ್‌ವರೆಗೆ ಸಂಘದ ಸರಕಾರ್ಯವಾಹ (ಪ್ರಧಾನ ಕಾರ್ಯದರ್ಶಿ)ರಾಗಿ ಜವಾಬ್ದಾರಿಯನ್ನು ನಿರ್ವಹಿಸಲಿದ್ದಾರೆ.

## ಕರ್ನಾಟಕ ದಕ್ಷಿಣ ಪ್ರಾಂತ ಜವಾಬ್ದಾರಿ

ಕರ್ನಾಟಕ ದಕ್ಷಿಣ ಪ್ರಾಂತದ ಸಂಘಚಾಲಕರಾಗಿ ಮಾನ್ಯ ಶ್ರೀ ಮ. ವೆಂಕಟರಾಮು ಅವರು ಮುಂದುವರಿದಿದ್ದು, ಸಹ ಪ್ರಾಂತ ಸಂಘಚಾಲಕ ರಾಗಿ ಮಂಗಳೂರಿನ ಪ್ರಖ್ಯಾತ ವೈದ್ಯರಾದ ಡಾ॥ ವಾಮನ್ ಶೆಣೈ ನೇಮಕಗೊಂಡಿದಾರೆ. ಪ್ರಾಂತ ಪ್ರಚಾರಕರಾಗಿ ಶ್ರೀ ಸುಧೀರ್ ಹಾಗೂ ಸಹ ಪ್ರಾಂತ ಪ್ರಚಾರಕರಾಗಿ ಶ್ರೀ ಗುರುಪ್ರಸಾದ್ ನೇಮಕಗೊಂಡಿದ್ದಾರೆ. ಈವರೆಗೆ ಪ್ರಾಂತ ಪ್ರಚಾರಕರಾಗಿದ್ದ ಶ್ರೀ ಸಿ.ಆರ್. ಮುಕುಂದ ಅವರು ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖರಾಗಿ ನೇಮಕಗೊಂಡಿರುವುದರಿಂದ ಸಹ ಪ್ರಾಂತ ಪ್ರಚಾರಕರಾಗಿದ್ದ ಶ್ರೀ ಸುಧೀರ್ ಅವರು ಪ್ರಾಂತ ಪ್ರಚಾರಕರಾಗಿ ನೇಮಕಗೊಂಡಿದ್ದಾರೆ. ಶ್ರೀ ಗುರುಪ್ರಸಾದ್ ಅವರು ಈವರೆಗೆ ಬೆಂಗಳೂರು ಮಹಾನಗರ ಪ್ರಚಾರಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇನ್ನುಳಿದಂತೆ ಶ್ರೀ ನಾ. ತಿಪ್ಪೇಸ್ವಾಮಿ ಅವರು ಪ್ರಾಂತ ಕಾರ್ಯವಾಹರಾಗಿ ಹಾಗೂ ಬಿ.ವಿ. ಶ್ರೀಧರಸ್ವಾಮೀ ಅವರು ಸಹ-ಪ್ರಾಂತ ಕಾರ್ಯವಾಹರಾಗಿ ಮುಂದುವರಿದಿದ್ದಾರೆ. ಉಳಿದಂತೆ ಯಾವುದೇ ಬದಲಾವಣೆಯಾಗಿಲ್ಲ.

ಕರ್ನಾಟಕ ಉತ್ತರ ಪ್ರಾಂತದ ಯಾವುದೇ ಜವಾಬ್ದಾರಿಯಲ್ಲಿ ಬದಲಾವಣೆಯಾಗಿಲ್ಲ.

## ವಿ. ನಾಗರಾಜ್ : ಕ್ಷೇತ್ರೀಯ ಸಂಘಚಾಲಕ



ಸಂಘದ ಹಿರಿಯ ಕಾರ್ಯಕರ್ತರಾದ ಬೆಂಗಳೂರು ಮೂಲದ ವಿ. ನಾಗರಾಜ ಅವರು ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳನ್ನೊಳಗೊಂಡ ದಕ್ಷಿಣ ಮಧ್ಯ ಕ್ಷೇತ್ರದ ಸಂಘಚಾಲಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಈವರೆಗೆ ಅವರು ಕ್ಷೇತ್ರೀಯ ಬೌದ್ಧಿಕ ಪ್ರಮುಖ್ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಬೆಂಗಳೂರಿನ ಟಿ.ಎಸ್. ವೆಂಕಟೇಶ್ ಅವರು ಕ್ಷೇತ್ರೀಯ ಸಂಪರ್ಕ ಪ್ರಮುಖರಾಗಿ ನಿಯುಕ್ತರಾಗಿದ್ದಾರೆ. ಡಾ॥ ಕಲ್ಲಡ್ಕ ಪ್ರಭಾಕರ ಭಟ್ ಕ್ಷೇತ್ರೀಯ ಕಾರ್ಯಕಾರಿಣಿ ಸದಸ್ಯರಾಗಿರುತ್ತಾರೆ.

## ಭಾರತದಲ್ಲಿ ಯಾರೂ ಅಲ್ಪಸಂಖ್ಯಾತರಲ್ಲ



"ಭಾರತದಲ್ಲಿ ಯಾರೂ ಅಲ್ಪಸಂಖ್ಯಾತರು ಇಲ್ಲ. ಸಾಂಸ್ಕೃತಿಕವಾಗಿ, ರಾಷ್ಟ್ರೀಯವಾಗಿ ಹಾಗೂ ವಂಶವಾಹಿಯಾಗಿ ಇಲ್ಲಿನ ಎಲ್ಲರೂ ಹಿಂದುಗಳೇ ಆಗಿದ್ದಾರೆ".

**– ದತ್ತಾತ್ರೇಯ ಹೊಸಬಾಳೆ,** ಸಹ ಸರಕಾರ್ಯವಾಹ

## 80 ಸಾವಿರ ಮಂದಿಗೆ ಸಂಘದ ತರಬೇತಿ



ಕಳೆದ ವರ್ಷ (2014-15) ಮಾರ್ಚ್‌ನ ಬಳಿಕ ನಡೆಸಲಾದ ಪ್ರಥಮ ವರ್ಷ ಸಾಮಾನ್ಯ ಮತ್ತು ವಿಶೇಷ ಸಂಘ ಶಿಕ್ಷಾ ವರ್ಗಗಳಲ್ಲಿ ಒಟ್ಟು 59 ವರ್ಗಗಳಲ್ಲಿ 9,609 ಸ್ಥಾನಗಳ 15,332 ಸ್ವಯಂಸೇವಕರು ಭಾಗವಹಿಸಿದ್ದರು.

ದ್ವಿತೀಯ ವರ್ಷ ಸಾಮಾನ್ಯ ಮತ್ತು ವಿಶೇಷ ವರ್ಗಗಳಲ್ಲಿ ಒಟ್ಟು 16 ವರ್ಗಗಳಲ್ಲಿ 2,902 ಸ್ಥಾನಗಳ 3,531 ಸ್ವಯಂಸೇವಕರು ಪಾಲ್ಗೊಂಡಿದ್ದರು. ತೃತೀಯ ವರ್ಷದಲ್ಲಿ 657 ಸ್ಥಾನಗಳ 709 ಸ್ವಯಂಸೇವಕರು ಭಾಗವಹಿಸಿದ್ದರು. ಈ ಅವಧಿಯಲ್ಲಿ ವಿವಿಧ ಪ್ರಾಂತಗಳ ಪ್ರಾಥಮಿಕ ವರ್ಗಗಳಲ್ಲಿ ಹಳ್ಳಿಗಳಿಂದ ಬಂದ ಬಹಳಷ್ಟು ಮಂದಿ ತರಬೇತಿ ಪಡೆದಿದ್ದಾರೆ. ಒಟ್ಟಿನಲ್ಲಿ 23,812 ಶಾಖೆಗಳ 80,409 ಮಂದಿ ತರಬೇತಿ ಪಡೆದಿದ್ದಾರೆ.

## ಸ್ವಯಂಸೇವಕರ ಮೂಲಕ ಸಾಮಾಜಿಕ ಸಾಮರಸ್ಯ

ಕೊಂಕಣ ಪ್ರಾಂತದ ರತ್ನಗಿರಿ ಜಿಲ್ಲೆಯ ದಾಪೋಲಿ ತಾಲೂಕಿನ ಒಸಂದಾ ಗ್ರಾಮದಲ್ಲಿ ಯಾವಾಗಲೂ ಕುಡಿಯುವ ನೀರಿನ ಅಭಾವ. ಹಳ್ಳಿಯ ಜನ ಒಗ್ಗಟ್ಟಾಗಿ ಈ ಸಮಸ್ಯೆಯ ಪರಿಹಾರಕ್ಕೆ ಯೋಜನೆಯೊಂದನ್ನು ರೂಪಿಸಿದರು. ಈ ನಡುವೆ ಹಳ್ಳಿಯ 16 ಕುಟುಂಬಗಳಿಗೆ ಬಹಿಷ್ಕಾರ ವಿಧಿಸಿರುವುದು ತಿಳಿದುಬಂತು. ವ್ಯವಸಾಯಿ ಸ್ವಯಂಸೇವಕರ (ಉದ್ಯೋಗಸ್ಥರು ಮತ್ತು ವೃತ್ತಿಪರರು) ಸಾಪ್ತಾಹಿಕ ಸಭೆಗಳನ್ನು ಸುಮಾರು ಒಂದೂವರೆ ವರ್ಷದಿಂದ ಹಳ್ಳಿಯಲ್ಲಿ ನಡೆಸಲಾಗುತ್ತಿತ್ತು. ಪ್ರತಿಯೊಂದು ಬಸ್ತಿ ಮತ್ತು ಸಮುದಾಯಗಳ ನಡುವೆ ವಿಚಾರ ವಿನಿಮಯ ಹಾಗೂ ಮಾತುಕತೆ ನಡೆಸುವ ಮೂಲಕ ಸ್ವಯಂಸೇವಕರು ಸಾಮಾಜಿಕ ಸಾಮರಸ್ಯ ತರಲು ಪ್ರಯತ್ನಿಸಿದರು. ಗ್ರಾಮ ಸಭಾದಲ್ಲಿ ಈ ಗಂಭೀರ ವಿಷಯದ ಕುರಿತು ಚರ್ಚೆ ನಡೆಯಿತು. ಬಹಿಷ್ಕಾರಕ್ಕೊಳಗಾದ 16 ಕುಟುಂಬಗಳನ್ನು ಹಳ್ಳಿಯ ಇತರ ಕುಟುಂಬಗಳೊಂದಿಗೆ ಒಂದುಗೂಡಿಸುವ ಬಗ್ಗೆ ಪ್ರಯತ್ನ ನಡೆಯಿತು. ನಾಲ್ಕು ತಿಂಗಳುಗಳ ದಣಿವರಿಯದ ಪ್ರಯತ್ನದ ಫಲವಾಗಿ ಗುಣಾತ್ಮಕ ವಾತಾವರಣ ಕಂಡುಬಂತು. ಈಗ ಹಳ್ಳಿಯ ಎಲ್ಲರೂ ಒಟ್ಟಾಗಿ ಖುಷಿಯಿಂದ ಜೀವಿಸುತ್ತಿದ್ದಾರೆ; ಸ್ವಯಂಸೇವಕರ ಪ್ರಯತ್ನವನ್ನು ಎಲ್ಲರೂ ಶ್ಲಾಘಿಸಿದ್ದಾರೆ.

## ರಾಯಲ್ ಸೊಸೈಟಿಗೆ ಭಾರತೀಯ ಅಧ್ಯಕ್ಷ


ಬ್ರಿಟಿಷ್ ಸರಕಾರಕ್ಕೆ ವೈಜ್ಞಾನಿಕ ಸಲಹೆಗಾರರಂತೆ ಕಾರ್ಯನಿರ್ವಹಿಸುವ ಇಂಗ್ಲೆಂಡ್‌ನ ಪ್ರಸಿದ್ಧ ವಿಜ್ಞಾನ ವಿದ್ವಾಂಸರ ಸಂಘಟನೆಯಾದ ರಾಯಲ್ ಸೊಸೈಟಿಯ ಮುಂದಿನ ಅಧ್ಯಕ್ಷರಾಗಿ ಭಾರತೀಯ ಮೂಲದ ನೊಬೆಲ್ ವಿಜೇತ ಸಂಶೋಧಕ ಪ್ರೊ. ವೆಂಕಟರಾಮನ್ ರಾಮಕೃಷ್ಣನ್ ಆಯ್ಕೆಯಾಗಿದ್ದಾರೆ. ತಮಿಳುನಾಡಿನ ಕಡಲೂರು ಜಿಲ್ಲೆಯ ಚಿದಂಬರಂನಲ್ಲಿ ಜನಿಸಿದ ಪ್ರೊ. ವೆಂಕಟರಾಮನ್ ರಾಮಕೃಷ್ಣನ್ ಅವರು 2009ರಲ್ಲಿ ರಸಾಯನ ಶಾಸ್ತ್ರಕ್ಕಾಗಿ ನೀಡಲಾಗುವ ನೊಬೆಲ್‌ಗೆ ಪಾತ್ರರಾಗಿದ್ದರು. ರೈಬೋಸೋಮ್‌ಗಳ ಸಂಕ್ಷಿಪ್ತ ರಚನೆಯನ್ನು ಪತ್ತೆ ಮಾಡಿದ್ದರು. ಪ್ರಸ್ತುತ ಜೀನ್ ವಿಜ್ಞಾನಿ ಸರ್ ಪೌಲ್ ನರ್ಸ್ ರಾಯಲ್ ಸೊಸೈಟಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು.

## ಕರ್ನಾಟಕದಲ್ಲಿ 21 ಕಡೆಗಳಲ್ಲಿ ಹಿಂದು ಸಮಾಜೋತ್ಸವ 500 ಮಠಾಧೀಶರ ಮಾರ್ಗದರ್ಶನ



ವಿಶ್ವ ಹಿಂದು ಪರಿಷತ್ ಸುವರ್ಣ ಮಹೋತ್ಸವದ ಪ್ರಯುಕ್ತ ಹಿಂದೂ ಸಮಾಜೋತ್ಸವಗಳನ್ನು ಆಯೋಜಿಸಲಾಗಿದ್ದು, ದೇಶದಾದ್ಯಂತ ಕರ್ನಾಟಕದಲ್ಲಿ ಒಟ್ಟು 21 ಹಿಂದೂ ಸಮಾಜೋತ್ಸವಗಳನ್ನು ನಡೆಸಲಾಗಿದೆ. ಮಾರ್ಚ್ 11ರಂದು ಮೈಸೂರಿನಲ್ಲಿ ನಡೆದ ಸಮಾಜೋತ್ಸವವು ಕರ್ನಾಟಕದಲ್ಲಿ ನಡೆದ ಕೊನೆಯ ಸಮಾಜೋತ್ಸವವಾಗಿದ್ದು, ಒಟ್ಟು 10 ಲಕ್ಷಕ್ಕೂ ಅಧಿಕ ಮಂದಿ ಹಿಂದು ಬಾಂಧವರು ಸಮಾಜೋತ್ಸವದಲ್ಲಿ ಭಾಗವಹಿಸಿದ್ದರು. ರಾಜ್ಯದ ವಿವಿಧ ಸಮುದಾಯಗಳ 500ಕ್ಕೂ ಅಧಿಕ ಮಠಾಧೀಶರು ಸಮಾಜೋತ್ಸವಗಳಿಗೆ ಆಗಮಿಸಿ, ಹಿಂದು ಸಮುದಾಯಕ್ಕೆ ಮಾರ್ಗದರ್ಶನ ಮಾಡಿದ್ದಾರೆ ಎಂದು ವಿಶ್ವ ಹಿಂದು ಪರಿಷತ್ ತಿಳಿಸಿದೆ.

## ಭಾರತೀಯ ಅಂಕಿಗಳ ಕಣ್ಮರೆ: ತರುಣ್ ವಿಜಯ್



ಭಾರತೀಯ ಪ್ರಾದೇಶಿಕ ಭಾಷೆಗಳ ಅಂಕಿಗಳು ಇಂಗ್ಲಿಷ್ ಹಾವಳಿಯಿಂದಾಗಿ ಮರೆಯಾಗುತ್ತಿವೆ. ಈ ಕುರಿತು ಕೇಂದ್ರ ಸರಕಾರ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಇನ್ನು ಕೆಲ ವರ್ಷಗಳಲ್ಲಿ ಪ್ರಾದೇಶಿಕ ಭಾಷೆಗಳ ಅಂಕಿಗಳು ಸಂಪೂರ್ಣ ನಶಿಸುವ ಸಾಧ್ಯತೆಯಿದೆ ಎಂದು ಸಂಸದ ತರುಣ್ ವಿಜಯ್ ರಾಜ್ಯಸಭೆಯಲ್ಲಿ ಹೇಳಿದ್ದಾರೆ. ಇಂದಿನ ಮಕ್ಕಳಿಗೆ ಮಾತೃಭಾಷೆಯಲ್ಲಿನ ಅಂಕಿಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ತಮಿಳು, ಹಿಂದಿ, ತೆಲುಗು ಮತ್ತಿತರ ಭಾಷೆಗಳಲ್ಲಿ ಇಂಗ್ಲಿಷ್ ಅಂಕೆಗಳನ್ನೇ ಬಳಸುತ್ತಿರುವ ಕಾರಣ ಜನಮಾನಸದಿಂದ ಅವು ದೂರವಾಗುತ್ತಿವೆ. ಸಂಖ್ಯಾಶಾಸ್ತ್ರಕ್ಕೆ ಬಹುದೊಡ್ಡ ಕೊಡುಗೆ ನೀಡಿರುವ ಭಾರತದಲ್ಲೇ ಈ ಸಮಸ್ಯೆ ಎದುರಾಗಿರುವುದು ದುರಂತ. ದಶಮಾಂಶ ಪದ್ಧತಿ, ಶೂನ್ಯಗಳ ಬಳಕೆಯನ್ನು ವಿಶ್ವಕ್ಕೆ ಕೊಡುಗೆಯಾಗಿ ಭಾರತ ನೀಡಿದೆ. ಅರಬ್ ಅಂಕಿಗಳನ್ನು ಭಾರತೀಯ ಭಾಷೆಯಿಂದಲೇ ಪಡೆಯಲಾಗಿದೆ. ಈ ಅಂಕಿಗಳನ್ನು ಅಲ್ಲಿ 'ಹಿಂದ್‌ಸೇ' ಎಂಬ ಶಬ್ದದಿಂದ ಕರೆಯಲಾಗುತ್ತದೆ. ಪಾಶ್ಚಿಮಾತ್ಯ ದೇಶಗಳು ಇದನ್ನು ಹಿಂದು-ಅರಬ್ ಸಂಖ್ಯೆ ಎಂದು ಗುರುತಿಸುತ್ತವೆ. ಆದರೆ ಭಾರತದಲ್ಲಿ ಇಂಗ್ಲಿಷ್ ಅಂಕಿಗಳನ್ನೇ ಹೆಚ್ಚು ಬಳಸಲಾಗುತ್ತಿದೆ ಎಂದರು.

पुंगव PUNGAVA

# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT PSO BENGALURU-560 026 on 10/25 of every Month REG.NO.CPMG/KA/BGS/102/2015-17

1-4-2015



## ನಾಗಪುರದಲ್ಲಿ ಆರೆಸ್ಸೆಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ

# ಅಂತರರಾಷ್ಟ್ರೀಯ ಯೋಗದಿನಕ್ಕೆ ಸ್ವಾಗತ – ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಆಗ್ರಹ

**ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ ನಿರ್ಧಾರಗಳನ್ನು ರೂಪಿಸುವ ಮಹತ್ವದ ವಾರ್ಷಿಕ ಬೈಠಕ್ ಅಖಿಲ ಭಾರತೀಯ ಪ್ರತಿನಿಧಿ ಸಭಾ ನಾಗಪುರದಲ್ಲಿ ಇತ್ತೀಚೆಗೆ ಮಾರ್ಚ್ 13, 14, ಮತ್ತು 15ರಂದು ಸಂಪನ್ನಗೊಂಡಿತು. ಮೂರು ದಿನಗಳ ಕಾಲ ನಡೆದ ಪ್ರತಿನಿಧಿ ಸಭೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿವಿಧ ಪ್ರಾಂತಗಳ ಆಯ್ದ ಪ್ರತಿನಿಧಿಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಸಂಘ ಪರಿವಾರ ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದು ಸಂಘಕಾರ್ಯ ಮತ್ತು ವಿವಿಧ ಕ್ಷೇತ್ರಗಳಲ್ಲಿ ಪರಿವಾರ ಸಂಘಟನೆಗಳಿಂದ ನಡೆಯುತ್ತಿರುವ ಚಟುವಟಿಕೆಗಳ ವಿಸ್ತೃತ ಚರ್ಚೆ ಹಾಗೂ ಮುಂದಿನ ಯೋಜನೆಗಳ ಚಿಂತನೆ ನಡೆಯಿತು. ಅಖಿಲ ಭಾರತೀಯ ಪ್ರತಿನಿಧಿ ಸಭಾ ವಿಶ್ವಸಂಸ್ಥೆಯು ಘೋಷಿಸಿರುವ ಅಂತರರಾಷ್ಟ್ರೀಯ ಯೋಗದಿನವನ್ನು ಸ್ವಾಗತಿಸುವ ಹಾಗೂ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಆಗ್ರಹಿಸಿ ನಿರ್ಣಯಗಳನ್ನು ಅಂಗೀಕರಿಸಿತು.**



## ಅಖಿಲ ಭಾರತೀಯ ಪ್ರತಿನಿಧಿ ಸಭೆಯ ನಿರ್ಣಯಗಳು

### ನಿರ್ಣಯ – 1: ಅಂತರರಾಷ್ಟ್ರೀಯ ಯೋಗದಿನಕ್ಕೆ ಸ್ವಾಗತ

ವಿಶ್ವಸಂಸ್ಥೆ ತನ್ನ 69ನೇ ಸಾಮಾನ್ಯ ಸಭೆಯಲ್ಲಿ ಪ್ರತಿವರ್ಷ ಜೂನ್ 21ನ್ನು ಅಂತರರಾಷ್ಟ್ರೀಯ ಯೋಗ ದಿನವಾಗಿ ಆಚರಿಸುವುದಾಗಿ ಘೋಷಿಸಿರುವುದು ಎಲ್ಲ ಭಾರತೀಯರು, ಭಾರತೀಯ ಮೂಲದವರು ಜನ ಮತ್ತು ಜಗತ್ತಿನಾದ್ಯಂತ ಯೋಗದ ಅನುಷ್ಠಾನ ಮಾಡುತ್ತಿರುವವರಿಗೆ ಅತೀವ ಸಂತೋಷ ಮತ್ತು ಅಪಾರ ಹೆಮ್ಮೆಯನ್ನು ತಂದಿದೆ. ಭಾರತದ ಪ್ರಧಾನಿಯವರು 27 ಸೆಪ್ಟೆಂಬರ್ 2014ರಂದು ತಮ್ಮ ಯುಎನ್‌ಜಿಎ(ವಿಶ್ವಸಂಸ್ಥೆಯ ಸಾಮಾನ್ಯ ಸಭೆ) ಭಾಷಣದಲ್ಲಿ ಆ ಬಗ್ಗೆ ಪ್ರಸ್ತಾಪಿಸಿದಾಗ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿತ್ತು ಎಂಬುದು ಅತ್ಯಂತ ಸಂತೋಷದ ವಿಷಯವಾಗಿದೆ. ನೇಪಾಳ ಅದಕ್ಕೆ ಕೂಡಲೇ ಬೆಂಬಲ ನೀಡಿತು ಮತ್ತು 175 ಸದಸ್ಯ ದೇಶಗಳು ನಿರ್ಣಯಕ್ಕೆ ಸಹ ಪ್ರಾಯೋಜಕರಾದವು. ಮೂರು ತಿಂಗಳಿಗೂ ಮುನ್ನ ಡಿಸೆಂಬರ್ 11ರಂದು ಅವಿರೋಧವಾಗಿ ನಿರ್ಣಯವನ್ನು ಅಂಗೀಕರಿಸಲಾಯಿತು.

ಯೋಗವು ಭಾರತದ ನಾಗರಿಕತೆ ಜಗತ್ತಿಗೆ ನೀಡಿದ ಕೊಡುಗೆ. ಈ ಪದ 'ಯುಜ್' ಮೂಲದಿಂದ ಬಂದಿದ್ದು, ಕೂಡುವುದು ಹಾಗೂ ಸಮಾಧಿ ಎಂದು ಇದರರ್ಥ. ಯೋಗ ದೈಹಿಕ ವ್ಯಾಯಾಮಕ್ಕೆ ಸೀಮಿತವಾದುದಲ್ಲ; ಬದಲಾಗಿ ಪೂರ್ಣವಾದ ಜೀವನ ವಿಧಾನ. ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ನಡುವೆ ಅದು ಸಮನ್ವಯವನ್ನು ಸಾಧಿಸುತ್ತದೆ. ಮಹರ್ಷಿ ಪತಂಜಲಿ ಮೊದಲಾದ ಋಷಿಮುನಿಗಳು ಇದನ್ನು ರೂಪಿಸಿದ್ದಾರೆ. ಗ್ರಂಥಗಳಲ್ಲಿ ಯೋಗವನ್ನು ಮನಸ್ಸಿನ ನಡವಳಿಕೆಗಳ ನಿಯಂತ್ರಣ (ಯೋಗಃ ಚಿತ್ತವೃತ್ತಿ ನಿರೋಧಃ), ಮನಸ್ಸನ್ನು ಶಾಂತಗೊಳಿಸುವ ಮಾರ್ಗ (ಮನಃ ಪ್ರಶಮನೋಪಾಯಃ ಯೋಗಃ) ಮತ್ತು ಎಲ್ಲವನ್ನೂ ಸಮಾನ ದೃಷ್ಟಿಯಿಂದ ಕಾಣುವುದು (ಸಮತ್ವಂ ಯೋಗ ಉಚ್ಯತೇ) ಮುಂತಾಗಿ ವರ್ಣಿಸಲಾಗಿದೆ. ಈಗ ನಮ್ಮಲ್ಲಿ ಸಾಮಾನ್ಯ ಜನ, ಸೆಲೆಬ್ರಿಟಿಗಳು (ಸುದ್ದಿಯಲ್ಲಿರುವವರು), ಉದ್ಯಮಿಗಳು, ಜಗತ್ತಿನಾದ್ಯಂತ ವಿವಿಧ ಸಂಸ್ಕೃತಿಗಳ ಮುತ್ಸದ್ದಿಗಳು ಸೇರಿದಂತೆ ಜನ ವ್ಯಾಪಕವಾಗಿ ಯೋಗದ ಮೊರೆ ಹೋಗುತ್ತಿದ್ದಾರೆ. ಯೋಗಮಾರ್ಗವು ನಿಸರ್ಗದೊಂದಿಗೆ ಸಮನ್ವಯ ಸಾಧಿಸಿದ ಸಮತೂಕದ ಜೀವನ ವಿಧಾನ ಎನಿಸಿದೆ. ಅನೇಕ ಸಂತರು, ಯೋಗಾಚಾರ್ಯರು ಮತ್ತು ಯೋಗ ತರಬೇತುದಾರರು ಜಗತ್ತಿನಾದ್ಯಂತ ಯೋಗವನ್ನು ಪ್ರಸಾರ ಮಾಡುವ ಬಗ್ಗೆ ನೀಡಿದ ಕೊಡುಗೆ ಕೃತಜ್ಞತಾರ್ಹವಾದುದು. ಯೋಗದ ಸಂದೇಶವನ್ನು ಜಗತ್ತಿನಾದ್ಯಂತ ಪ್ರಸಾರ ಮೂಡುವುದು ಯೋಗದ ಅನುಷ್ಠಾನ ಮಾಡುವ ಎಲ್ಲರ ಕರ್ತವ್ಯ.


ವಿಶ್ವಸಂಸ್ಥೆಯ ಈ ಐತಿಹಾಸಿಕ ನಿರ್ಣಯಕ್ಕೆ ಕಾರಣರಾದ ಭಾರತೀಯ ರಾಜತಾಂತ್ರಿಕರು, ನಿರ್ಣಯದ ಸಹ–ಪ್ರಾಯೋಜನೆ ಮಾಡಿದ ಸದಸ್ಯ ರಾಷ್ಟ್ರಗಳು, ಅದರ ಪರವಾಗಿ ಮಾತನಾಡಿದವರು ಮತ್ತು ವಿಶ್ವಸಂಸ್ಥೆಯ ಅಧಿಕಾರಿಗಳು ಎಲ್ಲರೂ ಅಭಿನಂದನಾರ್ಹರು. ಯೋಗಾಭ್ಯಾಸ ಮತ್ತು ಯೋಗ ಆಧಾರಿತ ಸಮಗ್ರ ಜೀವನಗಳ ಅನುಸರಣೆಯಿಂದ ಜಗತ್ತಿನಲ್ಲಿ ಏಕತಾಭಾವ ಹಾಗೂ ಸಾಮರಸ್ಯಗಳು ಮಾಡಬಹುದೆಂಬ ದೃಢವಾದ ವಿಶ್ವಾಸವಿದೆ.

ಶೈಕ್ಷಣಿಕ ಪಠ್ಯದಲ್ಲಿ ಯೋಗವನ್ನು ಸೇರಿಸುವುದು, ಯೋಗವನ್ನು ಕುರಿತ ಸಂಶೋಧನೆಗೆ ಸಹಕಾರ ನೀಡುವುದು ಮತ್ತು ಸಾಮಾಜಿಕ ಜೀವನದಲ್ಲಿ ಯೋಗವನ್ನು ಪ್ರಚುರಗೊಳಿಸುವ ಸಾಧ್ಯವಾದ ಎಲ್ಲ ಪ್ರಯತ್ನ ನಡೆಸುವುದು ಮುಂತಾದ ಕ್ರಮಗಳ ಮೂಲಕ ಕೇಂದ್ರ ರಾಜ್ಯ ಸರ್ಕಾರಗಳು ಪ್ರಸ್ತುತ ಉಪಕ್ರಮವನ್ನು ಮುಂದುವರಿಸಬೇಕಿದೆ.

### ರಾಮಮಂದಿರ ಕೈಬಿಟ್ಟಿಲ್ಲ

ರಾಮಮಂದಿರ ವಿವಾದಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣವನ್ನು ಆದಷ್ಟು ಬೇಗ ಇತ್ಯರ್ಥಗೊಳಿಸಬೇಕು ಎಂದು ಆರೆಸ್ಸೆಸ್‌ನ ಹೇಳಿದೆ. 'ರಾಮಮಂದಿರ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಈಗಾಗಲೇ ಹಿಂದೂಗಳ ಪರವಾಗಿ ತೀರ್ಪು ನೀಡಿದೆ. ಆದರೆ, ಪ್ರಕರಣ ಈಗ ಸುಪ್ರೀಂ ಕೋರ್ಟ್‌ನಲ್ಲಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವು ಆದಷ್ಟು ಬೇಗ ಇತ್ಯರ್ಥಗೊಳ್ಳಬೇಕು. ಅಲ್ಲಿಯವರೆಗೆ ಕಾದು ನೋಡುತ್ತೇವೆ. ಹಾಗೆಂದು ಆ ವಿಚಾರವನ್ನು ಕೈಬಿಟ್ಟಿದ್ದೇವೆ ಎಂದು ಅರ್ಥವಲ್ಲ' ಎಂದು ಆರೆಸ್ಸೆಸ್ ಪ್ರಧಾನ ಕಾರ್ಯದರ್ಶಿ ಭಯ್ಯಾಜಿ ಜೋಶಿ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು.

### ಬಾಳಾ ಸಾಹೇಬ್ ದೇವರಸ್ ಶತಮಾನೋತ್ಸವ ಆಚರಣೆ



'ಅಸ್ಪೃಶ್ಯತೆ ತಪ್ಪಲ್ಲದಿದ್ದಲ್ಲಿ ಜಗತ್ತಿನಲ್ಲಿ ಇನ್ನಾವುದೂ ತಪ್ಪಲ್ಲ' ಎಂದು ಕರೆ ನೀಡಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂರನೇ ಸರಸಂಘಚಾಲಕ ಬಾಳಾ ಸಾಹೇಬ್ ದೇವರಸ್ (11 ಡಿಸೆಂಬರ್, 1915 – 17 ಜೂನ್, 1996) ಅವರ ಜನ್ಮ ಶತಮಾನೋತ್ಸವವನ್ನು ಈ ವರ್ಷ ದೇಶದಾದ್ಯಂತ ಆಚರಿಸಲು ರಾಷ್ಟ್ರೀಯ ಸ್ವಯಂಸೇವಕ ಸಂಘ ನಿರ್ಧರಿಸಿದೆ. ಸಾಮಾಜಿಕ ಸಾಮರಸ್ಯವನ್ನು ಮೂಡಿಸುವ ಪ್ರಯತ್ನವಾಗಿ ಇವರ ಕೊಡುಗೆ ಅನನ್ಯವಾದುದು.

### ನಿರ್ಣಯ –2: ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ

ಭಾಷೆಯು ಸಂವಹನ ಮಾಧ್ಯಮವಾಗಿರುವ ಜೊತೆಗೆ ಸಂಸ್ಕೃತಿ ಮತ್ತು ಮೌಲ್ಯ ವ್ಯವಸ್ಥೆಯ ವಾಹಕ ಕೂಡ ಆಗಿದೆ. ಭಾರತ ಒಂದು ಬಹುಭಾಷಾ ರಾಷ್ಟ್ರ. ಎಲ್ಲ ಭಾರತೀಯ ಭಾಷೆಗಳು ಸಮಾನವಾಗಿ ನಮ್ಮ ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಹೆಮ್ಮೆಯನ್ನು ಪ್ರತಿಬಿಂಬಿಸುತ್ತವೆ. ಬಹುಭಾಷಾವಿದರಾಗಿರುವುದು ಒಂದು ವಿಶೇಷ ಅರ್ಹತೆ ಎಂಬುದು ನಿಜವಾದರೂ ವ್ಯಕ್ತಿತ್ವದ ವಿಕಾಸಕ್ಕೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ಅನುಕೂಲಕರ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆದ ಓರ್ವ ವಿದ್ಯಾರ್ಥಿ ಇತರ ಭಾಷೆಗಳನ್ನು ಸುಲಭದಲ್ಲಿ ಗ್ರಹಿಸಬಲ್ಲವನಾಗಿರುತ್ತಾನೆ. ಹಾಗೆಯೇ ವಿದೇಶಿ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಓರ್ವ ವ್ಯಕ್ತಿ ತನ್ನ ಪರಿಸರ, ಪರಂಪರೆ ಮತ್ತು ಜೀವನಮೌಲ್ಯಗಳಿಗೆ ಪರಕೀಯನಾಗುತ್ತಾನೆ. ಜೊತೆಗೆ ಆತ ತನ್ನ ಅಸ್ಮಿತೆ(ಐಡೆಂಟಿಟಿ)ಯನ್ನು ಕಳೆದುಕೊಳ್ಳುತ್ತಾನೆ; ಪ್ರಾಚೀನ ಜ್ಞಾನ, ವಿಜ್ಞಾನ ಮತ್ತು ಸಾಹಿತ್ಯಗಳ ಬಗೆಗೆ ಯಾವುದೇ ಅರಿವು ಹೊಂದಿರುವುದಿಲ್ಲ.

ಮದನಮೋಹನ ಮಾಲವೀಯ, ಮಹಾತ್ಮಗಾಂಧಿ, ರವೀಂದ್ರನಾಥ ಠಾಕೂರ್, ಡಾ. ಭೀಮರಾವ್, ಅಂಬೇಡ್ಕರ್, ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರಂತಹ ಖ್ಯಾತ ಚಿಂತಕರು, ಸಿ.ವಿ. ರಾಮನ್, ಪ್ರಫುಲ್ಲ ಚಂದ್ರ ರಾಯ್, ಜಗದೀಶ್‌ಚಂದ್ರ ಬೋಸ್‌ರಂತಹ ವಿಜ್ಞಾನಿಗಳು, ಹಲವು ಪ್ರಮುಖ ಶಿಕ್ಷಣತಜ್ಞರು ಮತ್ತು ಮನಶಾಸ್ತ್ರಜ್ಞರೆಲ್ಲ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ಸಹಜ ಹಾಗೂ ವೈಜ್ಞಾನಿಕವೆಂದು ಹೇಳಿದ್ದಾರೆ. ರಾಧಾಕೃಷ್ಣನ್ ಆಯೋಗ, ಕೊಠಾರಿ ಆಯೋಗ ಮುಂತಾಗಿ ಕಾಲಕಾಲಕ್ಕೆ ನೇಮಿಸಿದ ವಿವಿಧ ಶಿಕ್ಷಣ ಆಯೋಗಗಳು ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿರಬೇಕೆಂದು ಶಿಫಾರಸು ಮಾಡಿವೆ. ಮಾತೃಭಾಷೆಯ ಮಹತ್ವವನ್ನು ಮನಗಂಡ ವಿಶ್ವಸಂಸ್ಥೆ ಫೆಬ್ರವರಿ 21ನ್ನು ಮಾತೃಭಾಷಾ ದಿನವೆಂದು ಘೋಷಿಸಿದೆ.

ಶಿಕ್ಷಣ, ದೈನಂದಿನ ಉಪಯೋಗ ಮತ್ತು ಸಾರ್ವಜನಿಕ ವ್ಯವಹಾರಗಳಲ್ಲಿ ಮಾತೃಭಾಷೆಯ ಘನತೆಯನ್ನು ಎತ್ತಿಹಿಡಿಯುವ ಮೂಲಕ ಸರ್ವತೋಮುಖ ಅಭಿವೃದ್ಧಿ, ರಾಷ್ಟ್ರೀಯ ಏಕತೆ ಮತ್ತು ಅಭಿಮಾನಗಳನ್ನು ಸಾಧಿಸಬೇಕು. ಈ ನಿಟ್ಟಿನಲ್ಲಿ ಕುಟುಂಬಕ್ಕೆ ಪ್ರಮುಖ ಪಾತ್ರವಿದೆ. ಮಕ್ಕಳಿಗೆ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡುವ ಬಗ್ಗೆ ಹೆತ್ತವರು ದೃಢ ನಿರ್ಧಾರವನ್ನು ಕೈಗೊಳ್ಳಬೇಕು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಚಾಲ್ತಿಯಲ್ಲಿ ಇರುವ ಭಾಷಾ ನೀತಿಯನ್ನು ಪರಿಶೀಲನೆಗೆ ಒಳಪಡಿಸಿ ಮಾತೃಭಾಷೆ ಅಥವಾ ಸಂವಿಧಾನದಲ್ಲಿ ಗುರುತಿಸಲಾದ ರಾಜ್ಯ ಭಾಷೆಗಳಲ್ಲಿ ಶಿಕ್ಷಣ ನೀಡಬೇಕು. ಅದೇ ವೇಳೆ ಭಾರತೀಯ ಭಾಷೆಗಳಲ್ಲಿ ಶಿಕ್ಷಣ, ಆಡಳಿತ ಮತ್ತು ನ್ಯಾಯದಾನ ನೀಡುವ ಬಗ್ಗೆ ಕೂಡ ಕ್ರಮ ಕೈಗೊಳ್ಳಬೇಕು.

### ವ್ಯಾಪಕ ಬೆಂಬಲ

ಮಾತೃಭಾಷೆ ಅಥವಾ ರಾಜ್ಯದ ಅಧಿಕೃತ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕ್ರಮ ಕೈಗೊಳ್ಳಬೇಕು ಎಂಬ ಕುರಿತು ಆರೆಸ್ಸೆಸ್ ಕೈಗೊಂಡಿರುವ ನಿರ್ಣಯಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಕರ್ನಾಟಕ ರಾಜ್ಯ ಅಡ್ವೋಕೇಟ್ ಜನರಲ್ ಪ್ರೊ. ರವಿಕುಮಾರ್ ವರ್ಮ, ಕನ್ನಡ ಪುಸ್ತಕ ಪ್ರಾಧಿಕಾರ, ಸಾಧುಸಂತರು, ಕನ್ನಡದ ಎಲ್ಲ ವೃತ್ತಪತ್ರಿಕೆಗಳು, ಮಾಧ್ಯಮಗಳು ಸೇರಿದಂತೆ ವಿವಿಧ ಕ್ಷೇತ್ರಗಳಿಂದ ಭಾರಿ ಮೆಚ್ಚುಗೆ ಹಾಗೂ ಬೆಂಬಲ ವ್ಯಕ್ತವಾಗಿದೆ.

### ದೇಶದಾದ್ಯಂತ 55 ಸಾವಿರ ಶಾಖೆಗಳು

ರಾಷ್ಟ್ರೀಯ ಸ್ವಯಂಸೇವಕ ಸಂಘವು ಇಂದು ಒಟ್ಟು 33,222 ಸ್ಥಾನಗಳಲ್ಲಿ 51,330 ನಿತ್ಯಶಾಖೆಗಳನ್ನು ನಡೆಸುತ್ತಿದೆ. 12,847 ಸಾಪ್ತಾಹಿಕ ಮಿಲನ್‌ಗಳು ಹಾಗೂ 9,008 ಮಾಸಿಕ ಸಂಘ ಮಂಡಲಿಗಳು ನಡೆಯುತ್ತಿವೆ. ಇವುಗಳಲ್ಲಿ ಯುವ ವಿದ್ಯಾರ್ಥಿಗಳ ಶಾಖೆಗಳ ಸಂಖ್ಯೆ 6,077. ಇಂದು ಸಂಘಕಾರ್ಯವು ಒಟ್ಟೂ 55,010 ಸ್ಥಳಗಳನ್ನು ತಲುಪಿದೆ. 2012ಕ್ಕೆ ಹೋಲಿಸಿದರೆ ಇಂದು 5,161 ಸ್ಥಾನಗಳು ಮತ್ತು 10,413 ಶಾಖೆಗಳು ಅಧಿಕವಾಗಿವೆ.



ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19